# ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಸಿ.ಸಿ. ನಂ.3736/2023
ಪಿ.ಡಬ್ಲ್ಯೂ-1

ದಿನಾಂಕಃ 10-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಫಿರಿಯಾದಿ ಪರ ಶ್ರೀ.ಡಿ.ಎಮ್.ಸಿ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಹಾಜರು ಮಾಡಿದ್ದೇನೆ.

ಈಗ ನೋಡುತ್ತಿರುವ ದಾಖಲೆಯು ಆರೋಪಿಯು ನನಗೆ ನೀಡಿದ ಚೆಕ್ ಆಗಿರುತ್ತದೆ. ಅದನ್ನು ಈಗ ನಿ.ಪಿ.-1 ಎಂದು ಅದರಲ್ಲಿ ಆರೋಪಿಯ ಸಹಿಯನ್ನು ನಿ.ಪಿ.-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಗಳು ಒಂದು ಹಿಂಬರಹಗಳಾಗಿರುತ್ತವೆ ಅವುಗಳನ್ನು ಈಗ ನಿ.ಪಿ.-2 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಗಳು ಲಿಗಲ್ ನೋಟಿಸ್, ಅಂಚೆ ರಶೀದಿ, ಪೋಸ್ಟಲ್ ಕನ್ಸೇಸಮೆಂಟ್ ಆಗಿರುತ್ತವೆ ಅವುಗಳನ್ನು ಕ್ರಮವಾಗಿ ಈಗ ನಿಪಿ.-3 ರಿಂದ 5 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಲು ಪ್ರಾರ್ಥಿಸಿಕೊಳ್ಳುತ್ತೇನೆ

ಪಾಟೀ ಸವಾಲು: ಶ್ರೀ.ಸಿ.ಎಸ್.ಸಿ. ಆರೋಪಿ ಪರ ವಕೀಲರಿಂದ:

ಆರೋಪಿ ನನಗೆ 10 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ 7-8 ವರ್ಷಗಳಿಂದ ಗ್ಯಾರೇಜ ಕೆಲಸ ಮಾಡುತ್ತಾರೆ. ಆರೋಪಿ ನಿಮಗೆ ಪರಿಚಯ ಇರುವಾಗಿನಿಂದಲೂ ಗ್ಯಾರೇಜನಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯ ದಾಬಾ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರು ಒಟ್ಟು 5 ಜನ ಸಹೋದರರು ಇರುತ್ತಾರೆ. ದಾಬಾ ಆರೋಪಿ ಅಣ್ಣನದು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿ ದಾಬಾ ಹಾಕಿರುತ್ತೇವೆ ಹಣ ಬೇಕೆಂದು ಇಸಿದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ದಿ.20.01.2022 ರಂದು ಆರೋಪಿ ನನ್ನಿಂದ ಹಣ ಪಡೆದಿರುತ್ತಾರೆ. ಆ ಸಮಯದಲ್ಲಿ ರಾಜಕುಮಾರ & ಆರೋಪಿ ಅಣ್ಣ ಇಬ್ಬರು ಬಂದಿದ್ದರು. ಆರೋಪಿ ಅಣ್ಣ ನಾದ ಮಾರುತಿ ಸಮಕ್ಷಮ ಆರೋಪಿಗೆ ಹಣ ನೀಡಿರುತ್ಥೆನೆ. ಸದರಿ ವಿಷಯವನ್ನು ನನ್ನ ದೂರಿನ್ಲಲಿ ಬರೆಸಿರುವುದಿಲ್ಲ. ಆರೋಪಿ ಹಣ ಪಡೆದ 2 ತಿಂಗಳ ನಂತರ ಮರು ಪಾವತಿ ಮಾಡುತ್ತೇನೆಂದು ಹೇಳಿದ್ದೇನು ಎಂದರೆ ಸರಿ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೊರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.